


# ನೆಲದ ಕೆಳಗೆ ನಗರ

ಕೆನಡಾದ ಮುಖ್ಯ ವಾಣಿಜ್ಯ ಕೇಂದ್ರವಾದ ಟೊರೊಂಟೊ ನಗರದ ನೆಲದಡಿಯಲ್ಲಿ ಸುಮಾರು 30 ಕಿ.ಮೀ ಗಳಷ್ಟು ಉದ್ದದ ಪಾದಚಾರಿ ರಸ್ತೆಯಿದೆ. ಬಿಸಿಲು, ಮಳೆ, ಚಳಿಯ ಯಾವ ಜಂಜಾಟವೂ ಇಲ್ಲದೆ ಇಡೀ ನಗರವನ್ನು ನೆಲದಡಿಯಲ್ಲೇ ನಡೆಯುತ್ತಾ ಸುತ್ತು ಹೊಡೆಯಬಹುದು. ಇದು ಗಿನ್ನಿಸ್ ದಾಖಲೆಯ ಭೂಗತ ನಗರ!

■ ಚಿತ್ರ -ಲೇಖನ: ವಿ. ಪ್ರದೀಪ್ ಕುಮಾರ್



ಪಾತ್‌ಗೆ ಇಳಿಯಲು ಮೆಟ್ಟಿಲುಗಳು




ಟೊರೊಂಟೋದ ಪಾತ್

ಈ ಸೋಜಿಗ ನಗರದ ಹೆಸರು ಪಾತ್; ಇದರ ಸುತ್ತಳತೆ 40 ಲಕ್ಷ ಚದರ ಅಡಿ; ಇಲ್ಲಿದೆ ಜಗತ್ತಿನ ಅತ್ಯಂತ ದೊಡ್ಡ ಶಾಪಿಂಗ್ ವ್ಯವಸ್ಥೆ. ಆದರೆ, ಈ ನಗರ ಭೂಮಿಯ ಮೇಲಿಲ್ಲ; ನೆಲದಡಿಯಲ್ಲಿದೆ!

ಒಂದು ಕ್ಷಣ ಊಹಿಸಿ! ಬೆಂಗಳೂರು ನಗರದ ಕಂಟೋನ್ಮೆಂಟ್ ರೈಲು ನಿಲ್ದಾಣದ ಬಳಿ ನೀವು ಭೂಮಿಯ ಕೆಳಗೆ ಇಳಿಯುತ್ತೀರಿ. ಅಲ್ಲಿಂದ ಭೂಮಿಯ ಒಳಗೆಯೇ ಕನ್ನಿಂಗ್‌ಹ್ಯಾಮ್ ರಸ್ತೆಗೆ ಬರುತ್ತೀರಿ. ಅಲ್ಲಿಂದ ಶಿವಾಜಿ ನಗರ, ರಸೆಲ್ ಮಾರ್ಕೆಟ್, ಕಮರ್ಶಿಯಲ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಎಂ.ಜಿ.ರೋಡ್ ಸುತ್ತಾಡುತ್ತೀರಿ. ಅಲ್ಲಿಂದ ಸೇಂಟ್ ಮಾರ್ಕ್ಸ್ ರಸ್ತೆಗೆ ನಡೆದು ಭೂಮಿಯ ಒಳಗಿಂದ ಮೇಲೆ ಬರುತ್ತೀರಿ. ಇಷ್ಟು ದಾರಿ ಕ್ರಮಿಸಲು ನಿಮಗೆ ಬೇಕಾಗುವುದು ಬರೀ ಮೂವತ್ತು ನಿಮಿಷ! ಅದೂ ಮಾಲಿನ್ಯವಿಲ್ಲದ ವಾತಾವರಣದಲ್ಲಿ; ಆರಾಮದಾಯಕ ನಡಿಗೆಯಲ್ಲಿ!

ಇದು ಕಲ್ಪನೆಯ ಅತಿರೇಕ ಎನ್ನಬೇಡಿ! ಇದು ಪ್ರಾಯಶಃ ನಮ್ಮ, ನಿಮ್ಮ ಕಾಲದಲ್ಲಿ ನಮ್ಮ ದೇಶದಲ್ಲಿ ಆಗಲಿಕ್ಕಿಲ್ಲ. ಆದರೆ, ಇಂತಹ ಸೋಜಿಗವೊಂದು ದೂರದ ಟೊರೊಂಟೊ ನಗರದಲ್ಲಿದೆ. ಈ ಸೋಜಿಗವನ್ನು ನೋಡಿ, ಖುಶಿಯಾಗಿ ನಾವೂ ಉತ್ಸಾಹದಿಂದ ನಡೆದಾಡಿದೆವು. ಅಲ್ಲಿ ನೆಲದ ಕೆಳಗೊಂದು ದೊಡ್ಡ ನಗರವೇ ನಿರ್ಮಾಣವಾಗಿದೆ. ಚಳಿ ಗಾಳಿಯ ಅಥವಾ ಬಿಸಿಲಿನ ಯಾವ ಕಾಟವೂ ಇಲ್ಲದೆ ಶಾಪಿಂಗ್ ಮಾಡುತ್ತಾ ನಡೆದಾಡುವುದು ಪಾತ್ ನ ಬಹುದೊಡ್ಡ ಅನುಭವ.

ಉತ್ತರ ಅಮೆರಿಕಾದಲ್ಲಿ ನಿರಂತರವಾಗಿ ಹಿಮದರಾಶಿ ಬೀಳುತ್ತಲೇ ಇರುತ್ತದೆ. ಕೆನಡಾ ದೇಶದ ಮುಖ್ಯ ವಾಣಿಜ್ಯ ಕೇಂದ್ರವಾದ ಟೊರೊಂಟೊ ನಗರ ಈ ಹಿಮದಲ್ಲಿ ಸಂಪೂರ್ಣವಾಗಿ ಆವೃತವಾಗುವುದು ಸಹಜ. ನಾವು ಟೊರೊಂಟೊಗೆ ಭೇಟಿ ನೀಡಿದ ಸಮಯದಲ್ಲಿ, ರಕ್ತ ಹೆಪ್ಪುಗಟ್ಟಿಸುವಂತಹ ಚಳಿ. ನಮ್ಮೊಟ್ಟಿಗಿದ್ದ ಪ್ರವಾಸ ತಂಡದ ಎಲ್ಲರೂ ಈ ಚಳಿಯ ಹೊಡೆತಕ್ಕೆ ಗಡಗಡ ನಡುಗುತ್ತಿದ್ದರು.

ಅರವಿಂದ ಜಿ. ಜೋಶಿ



ಅವತ್ತಿನ ಮಟ್ಟಿಗೆ ನಾನು ಮತ್ತು ನನ್ನ ಶ್ರೀಮತಿ ತಂಡದಿಂದ ಬೇರ್ಪಟ್ಟು ಗೆಳೆಯನೊಬ್ಬನನ್ನು ಭೇಟಿಯಾಗಬೇಕಿತ್ತು. ನಗರದ ಪ್ರಮುಖ ರೈಲು ನಿಲ್ದಾಣದ ಮುಂಭಾಗದಲ್ಲಿ ಕಾಲೇಜಿನ ಆ ನನ್ನ ಸಹಪಾಠಿಯನ್ನು ಭೇಟಿ ಮಾಡುವ ಕಾರ್ಯಕ್ರಮ ಮೊದಲೇ ನಿಗದಿಯಾಗಿತ್ತು.

ಮುಂಜಾನೆಯ ಚಳಿಯಲ್ಲಿ ಗಡಗಡ ನಡುಗುತ್ತಲೇ ನಡೆದು, ರೈಲು ನಿಲ್ದಾಣದ ಮುಂಭಾಗದಲ್ಲೇ ಕಾಯುತ್ತಿದ್ದೆ. ಅಲ್ಲೇ ಸಿಕ್ಕಿದ ಸ್ನೇಹಿತ ಲೆಸ್ಲಿಯನ್ನು ಬಿಗಿದಪ್ಪಿದ ಉತ್ಸಾಹದಲ್ಲಿ ಕ್ಷಣಮಾತ್ರಕ್ಕೆ ಚಳಿ ಮಾಯವಾಗಿತ್ತು. ಉಭಯ ಕುಶಲೋಪರಿಯ ನಂತರ, ಲೆಸ್ಲಿ ಹೇಳಿದ: 'ನಿಮಗೆ ನಗರದ ವಿಶೇಷ ಪ್ರೇಕ್ಷಣೀಯ ಸ್ಥಳಗಳನ್ನು ಪರಿಚಯಿಸುತ್ತೇನೆ; ಅದೂ ಪೂರ್ತಿ ಬೆಚ್ಚಗಿನ ವಾತಾವರಣದಲ್ಲಿ!' ನಮಗೋ ಆಶ್ಚರ್ಯ! ಆದರೆ ದಿನವಿಡೀ ಧರಿಸಿ ಕಿರಿಕಿರಿ ಎನ್ನಿಸುತ್ತಿದ್ದ ಮಂಕಿ ಕ್ಯಾಪ್, ಗ್ಲೋವ್ಸ್, ಸ್ವೆಟರ್, ಜಾಕೆಟ್‌ಗಳನ್ನು ಆ ಒಂದು ದಿನವಾದರೂ ಕಿತ್ತೆಸೆದರೆ ಖಂಡಿತಾ ಖುಷಿಯೇ ಅನ್ನಿಸಿತು.

## ಭೂ ತಳದ ನಗರ

ರೈಲ್ವೆ ನಿಲ್ದಾಣದ ಪಕ್ಕದಲ್ಲೇ ಇದ್ದ ಮೆಟ್ಟಿಲುಗಳನ್ನು ಇಳಿಯುತ್ತಿದ್ದಂತೆಯೇ ಬೇರಾವುದೋ ಲೋಕಕ್ಕೆ ಪ್ರವೇಶಿಸಿದ




ಸಿಎನ್ ಟವರ್

ಅನುಭವ. ಇದೇ ಪಾತ್; ಟೊರೊಂಟೊ ಭೂಗರ್ಭದಲ್ಲಿನ ಇನ್ನೊಂದು ನಗರ.

ನೀವು ಕೆಲಸದ ನಿಮಿತ್ತ ಗ್ರಾಹಕರನ್ನು ಭೇಟಿಯಾಗಬೇಕೆ? ಬಸ್, ಮೆಟ್ರೊ, ರೈಲಿನಲ್ಲಿ ಹೋಗಬೇಕೆ? ಪ್ರವಾಸಿಗಳಾಗಿ ನಗರ ಪರ್ಯಟನ ಮಾಡಬೇಕೆ? ನಮಗಾದಂತೆ ಸುರಿಯುವ ಹಿಮರಾಶಿಯಿಂದ ಬಚಾವ್ ಆಗಬೇಕೆ? ನಗರದ ಕೇಂದ್ರಭಾಗದಲ್ಲಿ ಯಾವುದೇ ಕೆಲಸವಿದ್ದರೂ ಸರಿ, ಟೊರೊಂಟೊದ ಭೂಗರ್ಭದಲ್ಲಿರುವ 30 ಕಿ.ಮೀ.ನಷ್ಟಿರುವ 'ವಾಕ್‌ವೇ ಪಾತ್' ಹಿಡಿದರೆ, ಸಾಕು, ನಿಮ್ಮ ಎಲ್ಲ ಕೆಲಸವೂ ಸುಗಮ.


ನೆಲದೊಳಗಿನ 30 ಕಿ.ಮೀ ಉದ್ದಕ್ಕೂ ಅಲ್ಲಲ್ಲಿ ನೀವು ನೆಲದ ಮೇಲಿರುವ ಕಟ್ಟಡಗಳನ್ನು ಸಂಪರ್ಕಿಸಲು ಸಾಧ್ಯವಾಗುತ್ತದೆ. ಟೊರೊಂಟೋ ನಗರದ ಸುಮಾರು 50ರಷ್ಟು ಭಾರೀ ಕಟ್ಟಡಗಳು ಮತ್ತು ಆಫೀಸ್ ಟವರ್‌ಗಳನ್ನು ನೇರವಾಗಿ ತಲುಪಬಹುದು. ಜತೆಗೆ ಪಾತ್‌ನಲ್ಲಿ ನಡೆಯುತ್ತಾ ಹೋದರೆ ಆರು ಸಬ್‌ವೇ ಸ್ಟೇಶನ್‌ಗಳು, 2 ಬೃಹತ್ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು, ಎಂಟು ದೊಡ್ಡ ಹೋಟೆಲ್‌ಗಳು, ಒಂದು ರೈಲ್ವೇ ಟರ್ಮಿನಲ್ ಕೂಡಾ ಕನೆಕ್ಟ್ ಆಗಿದೆ. ಟೊರೊಂಟೋ ಮನರಂಜನೆಯ ಕೇಂದ್ರಗಳಾದ ಹಾಕೀ ಹಾಲ್ ಆಫ್ ಫೇಮ್, ರಾಯ್ ಥಾಮ್ಸನ್ ಹಾಲ್, ಏರ್ ಕೆನಡಾ ಸೆಂಟರ್, ರೋಜರ್ಸ್ ಸೆಂಟರ್, ಸಿ.ಎನ್.ಟವರ್‌ಗಳನ್ನೂ ಪಾತ್ ನಲ್ಲಿ ನಡೆದು ತಲುಪಬಹುದು. ಒಟ್ಟಾರೆ 1200ರಷ್ಟು ಶಾಪ್‌ಗಳು ಮತ್ತು ಸೇವಾ ಕೇಂದ್ರಗಳನ್ನು ಪಾತ್ ನಲ್ಲಿ ನಡೆದಾಡಿಯೇ ತಲುಪಬಹುದು. ಈ ಮಳಿಗೆಗಳಲ್ಲಿ ಸುಮಾರು 5 ಸಾವಿರ ಉದ್ಯೋಗಿಗಳಿದ್ದಾರೆ.



'ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್' ಪ್ರಕಾರ, 40 ಲಕ್ಷ ಚದರ ಅಡಿಯಷ್ಟು ಶಾಪಿಂಗ್ ವಿಸ್ತೀರ್ಣವಿರುವ ಪಾತ್, ಪ್ರಪಂಚದ ಅತ್ಯಂತ ದೊಡ್ಡ ಅಂಡರ್‌ಗ್ರೌಂಡ್ ಶಾಪಿಂಗ್ ಕಾಂಪ್ಲೆಕ್ಸ್. ಇಲ್ಲಿರುವ ಉದ್ಯೋಗಿಗಳೂ, ಸಾರ್ವಜನಿಕ ಬಸ್, ರೈಲು, ಮೆಟ್ರೊ ಉಪಯೋಗಿಸುವ 2 ಲಕ್ಷ ನಿವಾಸಿಗಳೂ, ಅಸಂಖ್ಯಾತ ಪ್ರವಾಸಿಗಳೂ ಪ್ರತಿನಿತ್ಯ ಈ ವ್ಯವಸ್ಥೆಯ ಫಲಾನುಭವಿಗಳು.

## ಪಾತ್ ಚರಿತ್ರೆ

ಪಾತ್‌ನ ಹಿನ್ನೆಲೆಯನ್ನು ತಿಳಿದರೆ ನೀವು ಖಂಡಿತಾ ಬೆರಗಾಗುತ್ತೀರಿ. ಮೊದಲು ಟೊರೊಂಟೊ ನಗರದ ಕೇಂದ್ರ ಭಾಗದಲ್ಲಿದ್ದ ಈಟನ್ ಡಿಪಾರ್ಟ್‌ಮೆಂಟ್ ಸ್ಟೋರ್‌ನ ಎರಡು ಶಾಖೆಗಳನ್ನು ಪಾದಚಾರಿಗಳು ಸುಲಭವಾಗಿ ತಲುಪಲು ಜೇಮ್ಸ್



ಸಿಎನ್ ಟವರ್‌ನಿಂದ ಕಾಣುವ ದೃಶ್ಯ

ರಸ್ತೆಯ ಬಳಿ ಸುರಂಗ ಮಾರ್ಗವನ್ನು ಮಾಡಲಾಯಿತು. ಈ ಸುರಂಗ ಮಾರ್ಗವನ್ನು ನಿರ್ಮಿಸಿದ್ದು 1900ನೇ ಇಸವಿಯಲ್ಲಿ!

ಈ ಪ್ರದೇಶದಲ್ಲಿ ಅನೇಕ ಸುರಂಗ ಮಾರ್ಗಗಳನ್ನು 1927ರ ಸುಮಾರಿಗೆ ಯೂನಿಯನ್ ರೈಲ್ವೆ ನಿಲ್ದಾಣ ಮತ್ತು ಇತರ ಕಟ್ಟಡಗಳ ಸಂಪರ್ಕಕ್ಕಾಗಿ ನಿರ್ಮಿಸಲಾಯಿತು. ನಗರದ ಜನಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದ್ದಂತೆಯೇ ದೂರದೃಷ್ಟಿಯುಳ್ಳ ಚಿಂತಕರೂ, ಯೋಜಕರೂ ಹುಟ್ಟಿಕೊಳ್ಳುತ್ತಾರೆ. 1960ರ ದಶಕದಲ್ಲಿ ಟೊರೊಂಟೊ ನಗರದ ಅಂಡರ್‌ಗ್ರೌಂಡ್ ವ್ಯವಸ್ಥೆಗೆ ನಾಂದಿ ಹಾಡಿದ ಅಧಿಕಾರಿಯ ಹೆಸರು ಮಾಥ್ಯು ಲಾಸನ್.

ಆ ಕಾಲಕ್ಕೆ ನಗರದ ಸಂಚಾರಿ ದಟ್ಟಣೆ ಹೆಚ್ಚಾಗಿ, ಪಾದಚಾರಿ ಮಾರ್ಗಗಳು ಕಿರಿದಾಗಿದ್ದವು; ರಸ್ತೆಬದಿಯ ವ್ಯಾಪಾರಿಗಳನ್ನು ಹೊರದೂಡಲು ನಾಗರಿಕರಿಂದ ಬೇಡಿಕೆ ಬಂತು. ಫುಟ್‌ಪಾತ್ ವ್ಯಾಪಾರಿಗಳು ಅದರ ವಿರುದ್ಧ ಪ್ರತಿಭಟನೆ ನಡೆಸಿದರು. ಮ್ಯಾಥ್ಯೂ ಲಾಸನ್, ಆಗ ನಿರ್ಮಾಣವಾಗುತ್ತಿದ್ದ ಎಲ್ಲ ಬಹುಮಹಡಿ ಕಟ್ಟಡಗಳ ವಿನ್ಯಾಸಕಾರರಿಗೆ ಅಂಡರ್‌ಗ್ರೌಂಡ್ ಪಾರ್ಕಿಂಗ್ ಮತ್ತು ಶಾಪಿಂಗ್ ಸೌಲಭ್ಯವನ್ನು ನಿರ್ಮಿಸಲು ಹುರುದುಂಬಿಸಿದ. ಹಾಗೆಯೇ ಈ ಎಲ್ಲ ಅಂಡರ್‌ಗ್ರೌಂಡ್ ವ್ಯವಸ್ಥೆಗೊಂದು ಸಮಗ್ರ ಸಂಪರ್ಕವನ್ನು ಕಲ್ಪಿಸುವ ಆಶ್ವಾಸನೆ ನೀಡಿದ. ಅದೇ ಇಂದಿನ ಪಾತ್ ಸೃಷ್ಟಿಗೆ ಕಾರಣವಾಯಿತು. ಮುಂದೆ ನಗರದಲ್ಲಿ ಆಗಿಂದಾಗ್ಗೆ ಜನದಟ್ಟಣೆ ಹೆಚ್ಚಾಗುತ್ತಿದ್ದಂತೆಯೇ ಪಾತ್‌ನ ನವೀಕರಣ ಮತ್ತು ವಿಸ್ತೀರ್ಣದ ಕಾರ್ಯ ನಿರಂತರವಾಗಿ ಆಗುತ್ತಿತ್ತು.

ಇಂದು ಬಳಕೆಯಲ್ಲಿರುವ ಪಾತ್‌ನ ಅಮೂಲಾಗ್ರ ಸುಧಾರಣೆಯ ಯೋಜನೆಯನ್ನು 1988ರಲ್ಲಿ ನಿರ್ಧರಿಸಲಾಯಿತು. ನಾಲ್ಕು ವರ್ಷಗಳ ಕಾಲ ಯೋಜನಾಬದ್ಧವಾಗಿ ಎಲ್ಲವನ್ನೂ ಲಿಂಕ್ ಮಾಡಲಾಯಿತು. 1992ರಲ್ಲಿ ಅದನ್ನು ಸಾರ್ವಜನಿಕರ ಬಳಕೆಗೆ ಉದ್ಘಾಟಿಸಲಾಯಿತು.



ಪಾತ್ ಅಂದರೆ, ಸಾಮಾನ್ಯವಾಗಿ ಅರ್ಥೈಸಲಾಗುವ ಮಾರ್ಗ ಎಂದಷ್ಟೇ ಅಲ್ಲ; ಇಂಗ್ಲೀಷಿನ ಪಿ– ದಕ್ಷಿಣ, ಎ–ಪಶ್ಚಿಮ, ಟಿ–ಉತ್ತರ ಮತ್ತು ಎಚ್–ಪೂರ್ವ ದಿಕ್ಕನ್ನೂ ಸೂಚಿಸುತ್ತದೆ; ಈ ನಾಲ್ಕು ದಿಕ್ಕುಗಳನ್ನು ಸೂಚಿಸಲು ವಿವಿಧ ಬಣ್ಣಗಳನ್ನು ಬಳಸಲಾಗಿದೆ. ಪಿ ಕೆಂಪು ಬಣ್ಣದ ಮಾರ್ಗ; ಅದರಲ್ಲಿ ಹೋಗುತ್ತಿದ್ದರೆ ನೀವು ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದೀರಿ ಎಂದರ್ಥ. ಹಾಗೆಯೇ ಎ (ಆರೆಂಜ್) ಪಶ್ಚಿಮ ದಿಕ್ಕಿಗೆ; ಟಿ (ನೀಲಿ) ಉತ್ತರ ದಿಕ್ಕಿಗೆ ಮತ್ತು ಎಚ್ (ಹಳದಿ) ಪೂರ್ವ ದಿಕ್ಕಿಗೆ ನಿಮ್ಮನ್ನು ಕರೆದೊಯ್ಯುತ್ತದೆ.



ರೋಜರ್ಸ್ ಸೆಂಟರ್

## ಟೊರೊಂಟೊ ಪಾತ್

| | |
|---|---|
| ವಾಕ್ ವೇ ವಿಸ್ತೀರ್ಣ: | 30 ಕಿ.ಮೀ |
| ಪ್ರವೇಶ ದ್ವಾರಗಳು: | 120 |
| ಶಾಪಿಂಗ್ ಪ್ರದೇಶ: | 4,000,000 ಚದರ ಅಡಿ |
| ಅಂಗಡಿಗಳು: | 1200 |
| ಉದ್ಯೋಗ ಸೃಷ್ಟಿ: | 5000 |
| ಬಹು–ಮಹಡಿ ಆಫೀಸ್ ಕಟ್ಟಡಗಳ ಸಂಪರ್ಕ: | 50 |

ಇನ್ನಿತರ ಸಂಪರ್ಕಗಳು:
20 ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ, 6 ಮೆಟ್ರೊ ಸ್ಟೇಶನ್‌ಗಳು, 2 ಸೂಪರ್ ಮಾರ್ಕೆಟ್ಸ್, 8 ಪ್ರಮುಖ ಹೋಟೆಲ್‌ಗಳು, 1 ಪ್ರಮುಖ ರೈಲ್ವೆ ನಿಲ್ದಾಣ.

ಸ್ನೇಹಿತ ಲೆಸ್ಲಿಯ ಜೊತೆ ನೆಲದಡಿಯ ಪಾತ್ ಮೂಲಕ ನಡೆಯುತ್ತಾ ನಗರದ ಕೆಲವು ಮುಖ್ಯ ಸ್ಥಳಗಳನ್ನು ವೀಕ್ಷಿಸಿದೆವು. ನಿಜಕ್ಕೂ ಇದೊಂದು ಆಹ್ಲಾದಕರ ಅನುಭವ.


ಸಿ.ಎನ್.ಟವರ್: 'ಆಧುನಿಕ ಜಗತ್ತಿನ ಅದ್ಭುತಗಳಲ್ಲಿ ಒಂದು' ಎಂದು ಪರಿಗಣಿಸಲಾಗುವ ಸಿ.ಎನ್.ಟವರ್ ಸುಮಾರು 34 ವರ್ಷಗಳವರೆಗೆ, ಅಂದರೆ 2010ರವರೆಗೆ, ಜಗತ್ತಿನ ಅತ್ಯಂತ ಎತ್ತರದ ಕಟ್ಟಡವೆಂದು ಖ್ಯಾತಿ ಪಡೆದಿತ್ತು. ಇಂದಿಗೂ ಪ್ರತಿವರ್ಷ ಸುಮಾರು 20 ಲಕ್ಷ ಪ್ರವಾಸಿಗರನ್ನು ಆಕರ್ಷಿಸುವ ಸಿ.ಎನ್. ಟವರ್, ಸಂಪರ್ಕ ವ್ಯವಸ್ಥೆಗಾಗಿ ನಿರ್ಮಿಸಿದ ವೀಕ್ಷಣಾಲಯ.

ಗ್ಲಾಸ್ ಫ್ಲೋರ್: 50ನೇ ಮಹಡಿಯಲ್ಲಿರುವ ಗ್ಲಾಸ್ ಫ್ಲೋರ್ ಇಲ್ಲಿನ ಅತ್ಯಂತ ಜನಪ್ರಿಯ ಆಕರ್ಷಣೆ. ನಿಮ್ಮ ಸ್ಥೈರ್ಯ, ಎದೆಗಾರಿಕೆಯನ್ನು ಪರೀಕ್ಷಿಸುವ ತಾಣವಿದು! ಏಕೆಂದರೆ, ಇಲ್ಲಿನ ಗ್ಲಾಸಿನ ನೆಲದ ಮೇಲೆ ನಿಂತು, ನಡೆದಾಡುವ ಅಸಾಧ್ಯವನ್ನು ಸಾಧಿಸಲು ಗಟ್ಟಿ ಗುಂಡಿಗೆಇರಲೇಬೇಕು. ಪಾರದರ್ಶಕ ಗ್ಲಾಸಿನ ಮೇಲೆ ನಡೆದಾಡುವಾಗ 1122 ಅಡಿ ಕೆಳಗೆ ಕಾಣುವ ಉದ್ಯಾನವನ, ರಸ್ತೆಯಲ್ಲಿನ ವಾಹನಗಳ ದೃಶ್ಯ, ಭಯ, ಆತಂಕ, ಆಶ್ಚರ್ಯ ಎಲ್ಲವನ್ನೂ ಒಮ್ಮೆಲೇ ತರುತ್ತದೆ.

ಆದರೆ ಭಯ ಪಡುವ ಅಗತ್ಯವಿಲ್ಲ; ಏಕೆಂದರೆ, ಉತ್ಕೃಷ್ಟವಾದ ಎರಡು ಪ್ರತ್ಯೇಕ ಗ್ಲಾಸಿನ ಪದರಗಳಿಂದ ತಯಾರಿಸಿರುವ ಈ ನೆಲ 1500 ಕೆ.ಜಿ ತೂಕವಿರುವ 12 ಹಿಪ್ಪೊಪೊಟಮಸ್‌ಗಳ ಭಾರವನ್ನು ತಡೆಯಬಲ್ಲ ಸಾಮರ್ಥ್ಯ ಹೊಂದಿದೆಯಂತೆ!

ಎಡ್ಜ್ ವಾಕ್: ಗ್ಲಾಸ್ ಫ್ಲೋರಿನ ಮೇಲೆ ಆರಾಮವಾಗಿ ನಡೆದಾಡುವವರಿಗೆ ಇತ್ತೀಚೆಗಷ್ಟೇ ಶುರುವಾಗಿರುವ ಇನ್ನೊಂದು ಸಾಹಸಮಯ ಆಕರ್ಷಣೆ. 1168 ಅಡಿಯ ಮೇಲಿರುವ 116ನೇ ಮಹಡಿಯ ಗೋಡೆಯಿಂದ ಹೊರಚಾಚಿದ್ದು, ಯಾವುದೇ ತಡೆಗಟ್ಟಿಲ್ಲದ ನೆಲದ ಮೇಲೆ ನಡೆಯುವುದೇ ಎಡ್ಜ್ ವಾಕ್. 6 ಪ್ರವಾಸಿಗರ ಗುಂಪಿನಲ್ಲಿ ನಡೆಸುವ ಈ ಕ್ರೀಡೆಯಲ್ಲಿ, ಶರೀರಕ್ಕೆ ಸುರಕ್ಷತಾ ಸರಪಳಿಯನ್ನು ಬಿಗಿದು, ಮೇಲಿರುವ ಟ್ರಾಲಿಗೆ ಅಳವಡಿಸಿ, ಯಾವುದೇ ರೀತಿಯ ಅಪಾಯವಿಲ್ಲದೆ, ಆಕಾಶದಲ್ಲಿ ತೇಲಾಡುತ್ತಾ, ಟೊರೊಂಟೊ ದರ್ಶನವನ್ನು ವಿಶಿಷ್ಟ ರೀತಿಯಲ್ಲಿ ಅನುಭವಿಸುವ ಅವಕಾಶ! ಈ ಸಾಹಸಮಯ ಕ್ರೀಡೆಯನ್ನು ಎಲ್ಲ ರೀತಿಯ ಸುರಕ್ಷತೆ, ಭದ್ರತೆಯ ಕ್ರಮಗಳನ್ನು ಅಳವಡಿಸಿ, ನಿರಪಾಯಕರ ಸ್ಥಿತಿಯಲ್ಲಿ ಏರ್ಪಡಿಸಿರುವುದು ಇಲ್ಲಿನ ವಿಶೇಷ.

ಈ ರೋಮಾಂಚನಕಾರಿ ಅನುಭವಕ್ಕೆ 175 ಕೆನಡಿಯನ್ ಡಾಲರ್ ಅಂದರೆ ಸುಮಾರು ಹತ್ತು ಸಾವಿರ ರೂಪಾಯಿ! ನಿಮ್ಮ ಭಗೀರಥ ಪ್ರಯತ್ನದ



ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.
ಬೆಂಗಳೂರು ಮೈಸೂರು 9880444450



ಈಟನ್ ಸೆಂಟರ್



ಟೊರೊಂಟೋದಲ್ಲಿ ಸ್ನೇಹಿತ ಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಜೊತೆ ಲೇಖಕ

ಸಾಹಸವನ್ನು ದೇಶಕ್ಕೆ ಮರಳಿದ ಮೇಲೆ ಸ್ನೇಹಿತರಿಗೆ ತೋರಿಸಲು ವೀಡಿಯೋ, ಫೋಟೊ ಮತ್ತು ಯೋಗ್ಯತಾ ಪತ್ರ ಕೊಡುತ್ತಾರೆ.

ರೋಜರ್ಸ್ ಸೆಂಟರ್: ವಿವಿಧೋದ್ದೇಶಗಳಿಗಾಗಿಯೇ ನಿರ್ಮಿಸಿರುವ ಈ ಬೃಹತ್ ಸ್ಟೇಡಿಯಮ್ಮಿನಲ್ಲಿ 54,000 ಪ್ರೇಕ್ಷಕರು ಆಸೀನರಾಗಲು ವ್ಯವಸ್ಥೆಯಿದೆ. ಪ್ರತಿಷ್ಠಿತ ಫುಟ್‌ಬಾಲ್, ಬೇಸ್‌ಬಾಲ್ ಪಂದ್ಯಗಳು, ಸಮ್ಮೇಳನ, ವಾಣಿಜ್ಯ ಪ್ರದರ್ಶನಗಳೆಲ್ಲವಕ್ಕೂ ಇದೇ ಆದ್ಯತೆಯ ಸ್ಥಳ. ವಿಶೇಷವೆಂದರೆ, ಮೋಟಾರ್ ಚಾಲಿತ ಮಡಚಿಕೊಳ್ಳುವ ಛಾವಣಿಯನ್ನು ಮೊಟ್ಟಮೊದಲ ಬಾರಿಗೆ ನಿರ್ಮಿಸಲಾಗಿದೆ. 348 ಕೋಣೆಗಳ ಬೃಹತ್ ಹೋಟೆಲ್ ಸಹ ಈ ಸಂಕೀರ್ಣದಲ್ಲಿದೆ.

ಹಾಕಿ ಹಾಲ್ ಅಫ್ ಫೇಮ್: ಹಿಮರಾಶಿಯ ಈ ದೇಶದಲ್ಲಿ ಪ್ರಖ್ಯಾತವಾದ ಕ್ರೀಡೆಗಳಲ್ಲಿ ಪ್ರಮುಖವಾಗಿರುವ ಐಸ್ ಹಾಕಿಯ ನೆನಪಿನಲ್ಲಿ ನಿರ್ಮಿಸಿರುವ ಸ್ಮಾರಕವೇ ಹಾಕಿ ಹಾಲ್ ಅಫ್ ಫೇಮ್. ಈ ಕ್ರೀಡೆಗೆ ಸಂಬಂಧಪಟ್ಟಂತೆ ಪ್ರಖ್ಯಾತ ತಂಡ ಮತ್ತು ಆಟಗಾರರ ಕುರಿತು ಸಂಗ್ರಹಾಲಯವಿದೆ. ಪ್ರವಾಸಿಗರು ಕಂಪ್ಯೂಟರ್ ಮೂಲಕ ಐಸ್ ಹಾಕಿ ಆಡುವ ಅವಕಾಶವನ್ನು ಇಲ್ಲಿ ಕಲ್ಪಿಸಲಾಗಿದೆ.

ರಾಯ್ ಥಾಮ್ಸನ್ ಹಾಲ್: ಅತ್ಯಂತ ವಿಶಿಷ್ಟವಾದ ಶೈಲಿಯಲ್ಲಿ ಕಟ್ಟಿರುವ ಈ ಕಲಾಮಂದಿರ ಸಂಗೀತ, ವಾದ್ಯಗೋಷ್ಠಿ ಕಾರ್ಯಕ್ರಮಗಳಿಗೆ ಹೆಸರುವಾಸಿ. ವಿಶ್ವವಿಖ್ಯಾತ ಟೊರೊಂಟೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯುವುದಿಲ್ಲೇ.

ಪಾತ್ ಉಪಯೋಗಿಸಿ ನೋಡುವ ಇನ್ನೂ ಅನೇಕ ಆಕರ್ಷಣೆಗಳಿವೆ. ಮನೆಯಿಂದ ಹೊರಬಂದರೆ, ಹೆಚ್ಚುಕಮ್ಮಿ



ಸಿಎನ್ ಟವರ್ ಅಂಚಿನಲ್ಲಿ ನಡಿಗೆ

ವರ್ಷವಿಡೀ ಕಾಡುವ ಭಯಂಕರ ಚಳಿಯಿಂದ ಪಾರಾಗಲು, ಆಫೀಸಿಗೆ ಹೋಗಲು ಅಥವಾ ದೈನಂದಿನ ಕಾರ್ಯಕ್ರಮಗಳಿಗಾಗಿ ಟೊರೊಂಟೊ ನಾಗರಿಕರು ಪರದಾಡಬೇಕಿಲ್ಲ. ಇಡೀ ದಿನ ಅಥವಾ ರಾತ್ರಿಯನ್ನು ಪಾತ್ ಉಪಯೋಗಿಸುತ್ತ ಸುತ್ತಾಡಬಹುದು; ಅವಶ್ಯಕತೆಗಳೇನೇ ಇರಲಿ, ಪಾತ್ ನಿಜಕ್ಕೂ ದಾರಿ ತೋರಿಸುವ, ಸಹಾಯಹಸ್ತದಂತೆ.

ಕೆನಡಾಕ್ಕೆ ವಲಸೆ ಹೋಗಿರುವವರಲ್ಲಿ ಲೆಸ್ಲಿಯ ಕುಟುಂಬವೂ ಒಂದು. ಕೆನಡಾದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಅತ್ಯಂತ ದೃಢವಾಗಿಯೂ, ಪ್ರಗತಿಪರವಾಗಿಯೂ ಇದೆ. ಜಗತ್ತಿನ ವಿವಿಧ ದೇಶಗಳಿಂದ ವಲಸೆ ಹೋಗಿರುವ ನಾಗರಿಕರು, ಈ ಸಮಾಜವನ್ನು ಬಹುಸಂಸ್ಕೃತಿಯ ತಾಣವಾಗಿ ಮಾರ್ಪಡಿಸಿದ್ದಾರೆ.

ಪ್ರವಾಸ ಮುಗಿಸಿ ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಬೇಡ ಬೇಡವೆಂದರೂ ಅಮೆರಿಕಾ, ಕೆನಡಾ ದೇಶದ ನೆನಪುಗಳು ಮುನ್ನುಗ್ಗಿ ಬರುತ್ತವೆ. ನಮ್ಮಲ್ಲಿ ಯಾವುದೇ ಅತ್ಯಾಧುನಿಕ ಸಂಪರ್ಕ ವ್ಯವಸ್ಥೆಯಾದರೂ ಜಾರಿಗೆ ಬಲು ಸಾಕಷ್ಟು ಸಮಯ ಹಿಡಿಯುತ್ತದೆ. ಅದರಿಂದ ಖರ್ಚಿನಲ್ಲಿ ಏರಿಕೆಯಾಗುತ್ತದೆ. ಜಾರಿಯಾದ ಬಳಿಕ ನಿರ್ವಹಣೆಯೇ ಇಲ್ಲ. ಬೆಂಗಳೂರಿನಲ್ಲಿ ಎಷ್ಟೊಂದು ಅಂಡರ್‌ಪಾಸ್‌ಗಳನ್ನು ಮಾಡಿದರು! ಆದರೆ ಒಂದಾದರೂ ಸರಿಯಿದೆಯೆ? ಮಳೆಗಾಲದಲ್ಲಿ ಕೆಸರುನೀರು; ಬೇಸಗೆಯಲ್ಲಿ ದುರ್ವಾಸನೆ. ಎಷ್ಟೋ ಅಂಡರ್‌ಪಾಸ್‌ಗಳನ್ನು ಸುರಕ್ಷತೆಯ ದೃಷ್ಟಿಯಿಂದ ಬೀಗ ಹಾಕಿ ಬಂದ್ ಮಾಡಿದ್ದಾರೆ! ಮೆಟ್ರೊ, ಫ್ಲೈಓವರ್‌ಗಳದ್ದೂ ಅದೇ ಕಥೆ.

ಹೆಚ್ಚೆಂದರೆ ಹದಿನೈದು ತಾಸುಗಳ ಪ್ರಯಾಣದ ದೂರದಲ್ಲಿ ಇರುವ ನಗರಗಳ ಅಭಿವೃದ್ಧಿಯ ಗುಣಮಟ್ಟ ನಮ್ಮ ಕಣ್ಣುಕುಕ್ಕುವಂತಿದೆ. ಟೊರೊಂಟೋದಂತಹ ನಗರಗಳಿಂದ ನಾವು ಕಲಿಯಬೇಕಾದದ್ದು ಸಾಕಷ್ಟಿದೆ. ಯೋಚನೆ ಮತ್ತು ಯೋಜನೆಗಳಲ್ಲಿ, ನಾವು ಅವರಿಗಿಂತ ಒಂದು ತಲೆಮಾರಿನಷ್ಟು ಹಿಂದಿದ್ದೇವೆ.